ಲಿಂಗವಿಲ್ಲದ ಕೊರಳ ಗುಣಗಡಿಗಿ, ಹರಳಿಲ್ಲದ ಮೂಗಬಟ್ಟು, ಹೊಳಪಿಲ್ಲದ ಝುಮುಕಿ, ಪದಕವಿಲ್ಲದ ಹಾರ – ಹೀಗೆ ಹೊಳಪು ಕಳಕೊಂಡ ಮತ್ತು ಕಿಲಬುಗಟ್ಟಿದ ಅನೇಕ ಅಮೂಲ್ಯ ವಸ್ತುಗಳ ಒಡತಿಯಾಗಿದ್ದ, ತೇರದಾಳ ಊರಿನ ಬಡ್ಡಿ ಬಂಗಾರಮ್ಮನೆಂದೇ ಹೆಸರಾಗಿದ್ದ ಅಡಿವೆಮ್ಮ ಈಗ ಮತ್ತೊಬ್ಬರ ಆಶ್ರಯದಲ್ಲಿ ಕಾಲ ತಳ್ಳಬೇಕಾಗಿರುವುದು ವಿಚಿತ್ರವಾದರೂ ಸತ್ಯವಾಗಿತ್ತು. ಆಗಿನ ಕಾಲಕ್ಕೆ ಅವಳ ದರ್ಪ ನೋಡಬೇಕಿತ್ತು. ಮೊದಲೇ ಸಣ್ಣ ಊರು. ಅಪವೇಳೆಯಲ್ಲಿ ಹೆಂಗಸರು ಕದ್ದುಮುಚ್ಚಿ ಗಿರವಿಗೆಂದು ತಂದ ಬೆಳ್ಳಿ–ಬಂಗಾರದ ಸಾಮಾನುಗಳು ಅವರು ಬೇಡುವ ಮೊತ್ತಕ್ಕೆ ಸಮವಾಗದಿದ್ದಾಗ ಅವರ ಕಾಲುಂಗುರಗಳನ್ನು ಕಾಡಿ, ಬೇಡಿ ಆಕೆ ಉಚ್ಚಿಸಿಕೊಂಡ ಉದಾಹರಣೆಗಳಿದ್ದವು. ಕಾಲುಂಗುರ ಕಳೆದರೆ ತಾವು ಸ್ವೇಚ್ಛಾಚಾರಿಗಳಾಗುತ್ತವೆಯೆಂಬ ಮತ್ತು ಮನಸ್ಸು ಎಲ್ಲಿಲ್ಲಿಯೋ ಹರಿಯುತ್ತದೆಯೆಂಬ ಹೆದರಿಕೆಯಿಂದ ಕೆಲವರು ಅವುಗಳನ್ನು ಉಚ್ಚಿ ಕೊಡಲು ಸುತಾರಾಂ ಒಪ್ಪುತ್ತಿರಲಿಲ್ಲ. ತುಂಬಿದ ಮಲಪ್ರಭೆಯ ನೀರು ತರಲು ಹೋದ ರೇಣುಕೆಯ ಮನಸ್ಸು ವಿಚಲಿತವಾಗಿ ಅವಳ ತಲೆಯ ಮೇಲಿನ ಸರ್ಪದ ಸಿಂಬಿ ಹರಿದು ಹೋಗಲಿಲ್ಲವೆ? ಸೀತೆ, ಅಹಲ್ಯೆ, ಕುಂತಿ, ದ್ರೌಪದಿ, ತಾರಾ, ಮಂಡೋದರಿ ಮುಂತಾದ ಪತಿವ್ರತೆಯರ ಬದುಕಿನ ಏರಿಳಿವುಗಳನ್ನು ಬಣ್ಣಿಸುತ್ತ, ಅವರ ಜೀವನ ವೃತ್ತಾಂತಗಳನ್ನು ವಿವರಿಸುತ್ತಿದ್ದಳು.



ಅವಳಿದ್ದ ಮನೆಯನ್ನು, ಅವಳು ವಾಸವಾಗಿದ್ದ ಓಣಿಯನ್ನು ಉತ್ಖನನ ಮಾಡಿದರೆ ಅನೇಕ ಮಾಹಿತಿಗಳು ದೊರಕಬಹುದಿತ್ತು. ಅಡವು ವ್ಯವಹಾರ ಮಾಡುತ್ತಿದ್ದ ಆಗಿನ ಕಾಲಕ್ಕೆ ಎರಡನೆಯ ಇಯತ್ತೆ ಓದಿದ್ದ ಅವಳು ಆಯಾ ವಸ್ತುವಿನ ಮೇಲೆ ಆಯಾ ಮಾಲಿಕರ ಹೆಸರು ಬರೆದು ಅದನ್ನು ಜೋಪಾನವಾಗಿ ತೆಗೆದಿರಿಸುತ್ತಿದ್ದಳು. ಆಕೆಯ ಅಕ್ಷರಗಳು ಮುತ್ತು ಜೋಡಿಸಿಟ್ಟಂತೆ ಲಕಲಕ ಅನ್ನುತ್ತಿದ್ದವು. ಗಿರವಿಗೆಂದು ಬರುವ ವಸ್ತುಗಳು ಕೂಡ ಮಜಮಜವಾಗಿರುತ್ತಿದ್ದವು. ಕೊರಳ ಮುತ್ತಿನ ಹಾರ, ಅವಲಕ್ಕಿಯ ಸರ, ಕೈ ಪಾಟಲಿ, ನೀರು ತುಂಬುವ ಹಂಡೆ, ಹೊಸ ಸೊಸೆ ತಂದ ಹಿತ್ತಾಳೆಯ ಕೊಡ ಮುಂತಾದ ದೊಡ್ಡ ವಸ್ತುಗಳು ಮುಗಿದ ಮೇಲೆ ಅಡವಿಡಲು ಉಳಿದವುಗಳೆಂದರೆ ದೇವರಕಟ್ಟೆಯ ಮೇಲಿನ ಬೆಳ್ಳಿಯ ವೀರಭದ್ರ, ತಥಾಸ್ತು ಎಂದು ಕೈ ಮುಂದು ಮಾಡಿರುವ ದುರ್ಗೆ, ಆರತಿ ತಟ್ಟೆಯಲ್ಲಿನ ಕಳಸ, ಹಿತ್ತಾಳೆಯ ಗಂಟೆ. ಡುಗುಡುಗು, ಡುಗುಡುಗು ಎಂದು ಮೈಲುಗಟ್ಟಲೆ ಸಪ್ಪಳ ಮಾಡುವ ಬುಲೆಟ್ ಪಟಪಟ್ಟಿಯ ಮೇಲೆ ಬಂದು ಬುಲೆಟ್ ಪಟಪಟ್ಟಿಯ ಮೇಲೆ ಹೋಗುವ ಅವಳ ಗಂಡನನ್ನಂತೂ ತೆಗಳದವರೇ ಇರಲಿಲ್ಲ: ಆಂವ ಇಷ್ಟ ಮೆರಿತಾನಲ್ಲ, ಒಂದಿಲ್ಲ ಒಂದಿನಾ ಅಂವನ್ನ ಬೇವಿನ ಟೊಂಗೆಯೊಳಗ ಒಯ್ತಾರು. ಇದ ಕಣ್ಣಿಂದ ನಾವು ಅದನ್ನ ಲಗೂನ ನೋಡುವಂಗ ಆಗಲಿ.. ಅಂತ ಕಟ್ಟೆಯ ಮೇಲೆ, ಕೋಣೆಯ ಒಳಗೆ, ಗಿಡದ ಕೆಳಗೆ ಮಂದಿ ಮಾತಾಡಿದ್ದೇ ಮಾತಾಡಿದ್ದು.

ಮಂದಿಯ ಶಾಪ ತಟ್ಟಿತೋ ಅಥವಾ ಅಡಿವೆಮ್ಮನ ಗಂಡ ಕಟ್ಟಿಕೊಂಡಿದ್ದ ವೈರಿಗಳು ಹೆಚ್ಚಾದರೋ ಗೊತ್ತಿಲ್ಲ. ಒಂದು ದಿನ ಅವನನ್ನು ರಾತ್ರಿಯ ವೇಳೆ ಊರ ಅಗಸಿ ಮಾರು ದೂರ ಇರುವಾಗಲೇ ತರುಬಿ ಕೊಡ್ಲಿ–ಕುಡುಗೋಲುಗಳಿಂದ ಕೊಂದರು. ಅವನ ಪಟಪಟ್ಟಿಯನ್ನು ಹೇಗೆ ತರುಬಿದರು, ಹೇಗೆ ಅವನನ್ನು ನೆಲಕ್ಕೆ ಕೆಡವಿದರು, ಹೇಗೆ ಅವನ ಕೊರಳಿಗೆ ಕೊಡಲಿ ಬೀಸಿದರು, ರಕ್ತ ಹೇಗೆ ಪುಟಿಯಿತು ಎನ್ನುವ ಅವನ ದುರ್ಮರಣದ ವಾರ್ತೆ ಒಬ್ಬರಿಂದ ಒಬ್ಬರಿಗೆ ದುರಂತ ಕಥಾನಕವಾಗಿ ಇನ್ನೂ ದಾಟುತ್ತಲೇ ಇದೆ. ಅವನು ಕೊಡುವ ಕಾಟ ತಾಳಲಾರದೆ ಅವನನ್ನು ಕೊಲ್ಲಬೇಕೆಂಬ ಪಿತೂರಿಯಲ್ಲಿ ಕೆಲವು ಹೆಂಗಸರೂ ಇದ್ದರೆಂದು ಹೇಳುತ್ತಾರೆ. ಆ ಧೀರೆಯರ ಹೆಸರುಗಳನ್ನು ತಮ್ಮ ಹೆಣ್ಣುಮಕ್ಕಳಿಗೆ ಇಟ್ಟು ಅವರನ್ನು ನೆನಪಿಸುವವರು ಇವತ್ತಿಗೂ ಇದ್ದಾರೆ. ಗಂಡ–ಹೆಂಡತಿಗೆ ಸರಿಯಿರಲಿಲ್ಲವೆಂದೂ ಮಕ್ಕಳ ಸಲುವಾಗಿ ಆಗೀಗ ಜಗಳಗಳಾಗುತ್ತಿದ್ದುವೆಂದೂ ಕೆಲವರು ಹೇಳಿದರು. ಗಂಡ ತೀರಿಹೋದ ಮೇಲೆ ಅಡಿವೆಮ್ಮನ ಆಡಳಿತ ಸ್ವಲ್ಪ ದಿನ ನಡೆದಂತಿತ್ತು. ಆದರೆ ಬರುಬರುತ್ತ ಅವಳು ಏಕಾಂಗಿಯಾದಳು. ಅವಳ ಕಣ್ಣೆದುರೆ ಅವಳ ಮೈದುನರು, ಅವಳ ಮಕ್ಕಳು ಆಕೆಗೆ ಮೋಸ ಮಾಡತೊಡಗಿದರು. ಆಕೆ ಪ್ರಶ್ನಿಸುತ್ತಿದ್ದಂತೆಯೇ ಒಂದು ದಿನ ಅವಳ ಮೇಲೆಯೂ ಹಲ್ಲೆಯಾಯಿತು. ಅಡಿವೆಮ್ಮನ ಸಹಾಯಕ್ಕೆ ಒಂದು ನರಪಿಳ್ಳೆಯೂ ಬರಲಿಲ್ಲವಂತೆ. ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಹಗೆ ಸಾಧಿಸುತ್ತಾರೆನ್ನುವುದು ಇಳಿವಯಸ್ಸಿನಲ್ಲಿ ಅವಳಿಗೆ ತಿಳಿಯತೊಡಗಿತು. ವರ್ಷದಲ್ಲಿ ಒಂದಷ್ಟು ದಿನ ತನ್ನ ಪರಿಚಯವಿದ್ದವರು, ಸಂಬಂಧಿಕರಲ್ಲಿ ಹೋಗಿಬರುತ್ತಿದ್ದಳು. ಹೀಗೆ ನಮ್ಮಲ್ಲಿ ಯಾವಾಗಲಾದರೊಮ್ಮೆ ಬರುತ್ತಿದ್ದವಳು ಅವಳು. ಆಕೆ ನಮ್ಮ ಊರಿಗೆ ಬಂದು ಹೋಗಿ ಎಷ್ಟೋ ವರ್ಷ ಆಗಿತ್ತು. ಅಪ್ಪ ಒಮ್ಮೊಮ್ಮೆ ತೇರದಾಳಕ್ಕೆ ಹೋಗಿ ಅವಳ ಬಗ್ಗೆ ವಿಚಾರಿಸಿ ತನ್ನ ಪಾಲಿನದು, ದೊಡ್ಡಪ್ಪನದು ಎಂದೆಲ್ಲ ವಿವರಿಸಿ ಸ್ವಲ್ಪ ದುಡ್ಡು ಕೊಟ್ಟು ಬರುತ್ತಿದ್ದ. ನಾವೆಲ್ಲರೂ ಬಹುತೇಕ ಆಕೆಯನ್ನು ಮರೆತುಬಿಟ್ಟಿದ್ದೆವು. ಮರೆಯದಿದ್ದರೂ ಮರೆತಿರುವಂತೆ ಸೋಗುಹಾಕುತ್ತಿದ್ದೆವು. ಯಾಕೆಂದರೆ ಅವಳು ಬಂದರೆ ಅಪ್ಪನ ಗಂಟು ಖರ್ಚಾಗುತ್ತದೆಯೆಂಬುದು ಒಂದು ಕಾರಣವಾದರೆ ಅವಳು ಹೇಳುವ ಹಿಂದಿನ ಪುರಾಣಗಳು ಮುಗಿಯುತ್ತಲೇ ಇರಲಿಲ್ಲ.

ಮರೆಯಾಗಿದ್ದ ಬೇತಾಳ ಮರಳಿ ವಕ್ಕರಿಸಿತೆನ್ನುವಂತೆ ದೂರದಲ್ಲಿದ್ದ ಈ ವೃದ್ಧೆ ಮದುವೆಯೊಂದರ ನೆಪದಲ್ಲಿ ನಮ್ಮ ಊರಿಗೆ ವಕ್ಕರಿಸಿದಳು. ಊರಿಗೆ ವಕ್ಕರಿಸಿದರೆ ವಕ್ಕರಿಸಲೆಂದು ಸುಮ್ಮನಿರಬಹುದಿತ್ತು. ಆದರೆ ಆಕೆ ಬಂದಿದ್ದು ಅಣ್ಣನ ಮದುವೆಗೆ. ಅಂದರೆ ನಮ್ಮ ದೊಡ್ಡಪ್ಪ ಗಿರಿಮಲ್ಲಪ್ಪನ ಮಗನ ವಿವಾಹಕ್ಕೆ. ಅವರೇನೋ ಹೋಗಿ ಕರೆದುಬಂದಿದ್ದರು. ಇಷ್ಟು ದೂರ ಏನು ಬಂದಾಳು? ನಾವೆಲ್ಲ ಹಾಗೆಯೇ ಭಾವಿಸಿದ್ದೆವು. ಯಾವುದೋ ಮೂಲೆಯಲ್ಲಿದ್ದ ಆ ಹಣ್ಣು ಹಣ್ಣು ವೃದ್ಧೆ ಮದುವೆಗೆ ಬರುವದೆಂದರೇನು, ತಾನು ಒಟ್ಟುಗೂಡಿಸಿದ್ದ ಪುಣ್ಯದಿಂದ ತನ್ನ ಕೈಯಾರೆ ಮದುಮಕ್ಕಳನ್ನು ಹರಸುವುದೆಂದರೇನು, ಹಳೆ ಕಾಲಕ್ಕೂ ಹೊಸ ಕಾಲಕ್ಕೂ ಒಂದು ಕೊಂಡಿ ನಿರ್ಮಾಣವಾಗುವುದೆಂದರೇನು? ಆಹಾ! ಅವಳ ಹಾಜರಾತಿಯ ಈ ಮದುವೆ ಪ್ರಾದೇಶಿಕ ಇತಿಹಾಸದ ಒಂದು ಪುಟವಾಯಿತು. ಬಾಗಿದ ಬೆನ್ನು, ನಡುಗುತ್ತಿರುವ ದೇಹವನ್ನು ಹೇಗೋ ಬಾಗಿ, ಎದ್ದು, ಕುಳಿತು ಮದುವೆ ಮಂಟಪಕ್ಕೆ ಬಂದು ಅವರ ಮೇಲೆ ನಾಲ್ಕು ಅಕ್ಷತೆ ಹಾಕಿದಳು. ಅವಳ ಮುಖದಲ್ಲಿನ ಸಂತೋಷವನ್ನು ಆಗ ನೋಡಬೇಕಿತ್ತು. ಜೋತಾಡುವ ಕೈ–ಕಾಲು,